


## ಪ್ರೇಮದ ಕಚಗುಳಿ!

'ಸುಧಾ' ಫೆ.21ರ ಮುಖಪುಟ ಲೇಖನ 'ಪ್ರೇಮೋತ್ಸಾಹ..!' (ಕೆ.ಎಸ್.ಪವಿತ್ರ, ಪುಷ್ಪಾ ಎನ್.ಕೆ. ರಾವ್) ಪ್ರೇಮಿಗಳ ಮನಸ್ಸನ್ನು ಮುದಗೊಳಿಸಿ, ಓದುಗರಿಗೆ ಕಚಗುಳಿ ಇರಿಸಿದವು.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು/ ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ

## ಅನಗತ್ಯ ಆಚರಣೆ!

ಸ್ವಾತಂತ್ರ್ಯ ದಿನಾಚರಣೆಯಂತಹ ರಾಷ್ಟ್ರೀಯ ಮಹತ್ವದ ದಿನಗಳನ್ನು ಆಚರಿಸದ ಯುವ ಜನತೆ, ವ್ಯಾಲೆಂಟೈನ್ಸ್ ಡೇಯಂದು ಸಂಭ್ರಮಿಸುವುದು ಖೇದಕರ!

-ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

## ಸೀತೆ ಅಗ್ನಿಪ್ರವೇಶಕ್ಕೆ ರಾಮನೇ ಕಾರಣ..?

ವಿಚಾರ ಲಹರಿಯ ಶಿಕಾಕುಗೆ ಶ್ರೀರಾಮನ ಮೇಲೆ ಕೋಪ ಯಾಕೆ? ಎನ್ನುವ ಬಳ್ಳಾರಿ ಮಧ್ವರಾಜ್ ಪ್ರಶ್ನೆಗೆ, ಫೆ.21ರ 'ಸಮುದ್ರ ಮಥನ'ದಲ್ಲಿ ಬಿ.ಆರ್.ರಾಜಶೇಖರ ಸರಿಯಾಗಿ ಉತ್ತರಿಸಿದ್ದಾರೆ. ಸೀತೆ ಪುನೀತೆ ಎಂದು ತಿಳಿದಿದ್ದರೂ, ಆಕೆಯ ಅಗ್ನಿ ಪ್ರವೇಶಕ್ಕೆ ಶ್ರೀರಾಮನೇ ಕಾರಣವಲ್ಲವೆ? ಗರ್ಭಿಣಿ ಸೀತೆಗೆ ಊರ ಹೊರಗಾದರೂ ಆಶ್ರಯ ಕಲ್ಪಿಸದಷ್ಟು ಕಠಿಣ ಹೃದಯಿ ಶ್ರೀರಾಮ 'ಮರ್ಯಾದಾ ಪುರುಷೋತ್ತಮ' ಹೇಗಾದಾನು?

-ಎಚ್.ಬಿ.ಮಣಿ ಹಾಡ್ಯ, ಕೆ.ಆರ್.ನಗರ

## ಸುಧಾರಣೆ ಬೇಡವೆ?

'ಬೆಳಕಿಲ್ಲದ ಹಳ್ಳಿಯಲ್ಲಿ ಕುಣಬಿ ಪರಿವಾರ'ದ ದಯನೀಯ ಸ್ಥಿತಿ ಓದಿ ಕರುಳು ಕಿವುಚಿತು. ಇಂಥ ಗ್ರಾಮಗಳ ಸುಧಾರಣೆ ಮಾಡದ ಸರ್ಕಾರಿ ಅಧಿಕಾರಿಗಳು ನಿದ್ದೆ ಮಾಡುತ್ತಿರುವರೆ?

-ಡಾ.ಲೀಲಾವತಿ ದೇವದಾಸ್, ಬೆಂಗಳೂರು

## ಸುಧಾರಣೆ ಬೇಡ ಬಿಡಿ!

ನಾವು ತಿಳಿದುಕೊಂಡಿರುವ ನಾಗರಿಕ ಪ್ರಪಂಚಕ್ಕಿಂತ ಕುಣಬಿಗಳು ಹೆಚ್ಚು ಸುಖಿಗಳು. ಜಂಜಾಟಗಳ ನಮ್ಮ ಬದುಕು ಬೇಡ, ಅವರ ಪಾಲಿಗೆ ಅವರು ಸುಖವಾಗಿ ಬದುಕಲಿ ಬಿಡಿ!

-ಹೇಮಾ ಮುರುಳಿ, ಹೊಸಗ್ರಹಾರ

## ಅದ್ಭುತ ಸುಂದರಿ!

ವಂಡರ್‌ಪುಟದಲ್ಲಿ ಪ್ರಕಾಶ ಮನ್ನಂಗಿ ಪರಿಚಯಿಸಿರುವ 'ಕೆಂಪು ಅಧರದ ಸುಂದರಿ!' ಅದ್ಭುತ!

-ಎಚ್.ಆನಂದಕುಮಾರ್, ಚಿತ್ರದುರ್ಗ

## ದೀರ್ಘಾಯುಷ್ಯದ ಗುಟ್ಟು

ಸುದೀರ್ಘ ಕಾಲ ಸುಖವಾಗಿ ಹೇಗೆ ಬಾಳಬಹುದು ಎಂಬುದನ್ನು ಯು.ಪಿ. ಪುರಾಣಿಕ್ ಸೊಗಸಾಗಿ, ಅಷ್ಟೇ ಸರಳವಾಗಿ ಹೇಳಿದ್ದಾರೆ.

-ಮಹೇಶ ಈರಣ್ಣ, ಲಿಂಗಸೂಗೂರು/ ಕೇಶವ ಪ್ರಭು, ಶಿವಮೊಗ್ಗ

## ಲವಲವಿಕೆಯ ಕಥಾ ಶೈಲಿ

ಕ್ಷಣಿಕ ಸುಖಕ್ಕೆ ಬಲಿಯಾದರೆ ಎಚ್‌ಐವಿ ಒಂದೇ ಅಲ್ಲ, ಜೈಲಿಗೆ ಹೋಗುವ ಸಾಧ್ಯತೆ ಕೂಡ ಇದೆ ಎಂಬುದನ್ನು ಹೂಲಿ ಶೇಖರ್ ಕಥೆ 'ವಿಜಿಟಿಂಗ್ ಕಾರ್ಡ್' ಲವಲವಿಕೆಯ ಆಕರ್ಷಕ ಶೈಲಿಯಲ್ಲಿ ಹೇಳಿದೆ.

-ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ/ಕೊಹಿಮ, ಬಸರಕೋಡು/ ಎಚ್.ಎಸ್.ವಿಶ್ವನಾಥ್, ಶಿವಮೊಗ್ಗ

## ಚಿಕ್ಕ, ಚೊಕ್ಕ ಕಥೆ

ಡಾ.ವಿನಯ ಶ್ರೀನಿವಾಸ್‌ರ 'ಲೆಕ್ಕಾಚಾರ' ಚಿಕ್ಕ ಹಾಗೂ ಚೊಕ್ಕವಾದ ಕಥೆ.

-ತರಂಗಿಣಿ, ತುಮಕೂರು

## ಲತಾಗೆ ಬೇಕು, ಜಾನಕಿಗೇಕೆ ಬೇಡ?

ಫೆ.14ರ 'ಸುಧಾ' ಸೆಲೆಬ್ರಿಟಿಯಲ್ಲಿ 'ಎಸ್.ಜಾನಕಿ ಅವರಿಗೆ ಭಾರತ ರತ್ನ ಬರಬೇಕಿತ್ತು ಎಂದು ಅವರ ಮಗ ಹೇಳಿರುವುದು ಅತಿಯಾಯಿತು' ಎಂಬ ಹನಿ ಅವರ ಆಕ್ಷೇಪ ಸರಿಯಲ್ಲ. ಲತಾ ಮಂಗೇಶ್ಕರ್‌ಗೆ ಭಾರತ ರತ್ನ ಬಂದಿರುವಾಗ ಅವರ ಸಮಾನ ಪ್ರತಿಭೆ ಜಾನಕಿಯವರಿಗೆ ಏಕೆ ಬೇಡ?

-ಸುಮಿತ್ರಾ ಶಂಕರಪ್ಪ, ಹಳಿಯಾಳ/ ಸಿದ್ದರಾಮ ಹಿರೇಮಠ, ಬೆಳಗಾವಿ

## ಛೆಬ್ಬಿಯವರ ಸೂಕ್ತ ಸಲಹೆ

ಅತ್ಯಾಚಾರಿಗೆ ಯಾವ ರೀತಿ ಶಿಕ್ಷೆ ಕೊಡಬಹುದು ಎಂಬುದನ್ನು ಡಾ.ವಿನೋದ ಛೆಬ್ಬಿಯವರು ಫೆ.14ರ 'ಸುಖೀಭವ' ಸಂಚಿಕೆಯಲ್ಲಿ ಮಾರ್ಮಿಕವಾಗಿ ತಿಳಿಸಿದ್ದಾರೆ. ಇದೊಂದು ಉತ್ತಮ ಸಲಹೆ.

-ಕೆ.ಸಿ.ಸತ್ಯನಾರಾಯಣ, ದೊಡ್ಡಬಳ್ಳಾಪುರ





ಉಪಯೋಗಿಸುವ ವಿಧಾನ

ಅಧಿಕವಾದ ಕ್ರಿಮಿಕೀಟಗಳ ಸೋಂಕಿದ್ದರೆ ಧಾರಕಕ್ಕೆ ಸ್ಪ್ರೇಯರ್ ಜೋಡಿಸಿ ನೇರವಾಗಿ ಸ್ಪ್ರೇ ಮಾಡಬಹುದು.



ಅಥವಾ

ಮನೆಯನ್ನು ಸ್ವಚ್ಛಗೊಳಿಸಲು ಒಂದು ಬಕೆಟ್ ನೀರಿಗೆ 2-3 ಕ್ಯಾಪ್‌ಗಳ ಪ್ರಮಾಣದ ಗಿಡಮೂಲಿಕೆ ಖಟ್ನಿಲ್‌ನ್ನು ಹಾಕಿ ಮಿಶ್ರಣ ಮಾಡಿ

..... ಈ ಕ್ರಿಮಿ ಕೀಟಗಳಿಂದ ಮಲೇರಿಯ, ಕಾಲರ, ಡೆಂಗ್ಯೂ, ಆಮಶಂಕೆ, ಗಂದೆಗಳು ಮತ್ತು ಇನ್ನೂ ಅನೇಕ ಕಾಯಿಲೆಗಳು ಉಂಟಾಗತ್ತವೆ.

ಇಂತಹ ತೊಂದರೆ ಬಾರದಂತೆ ತಡೆಯಲು, ಕ್ರಿಮಿ ಕೀಟಗಳ ನಿವಾರಣೆಗಾಗಿ ಪ್ರತಿದಿನ ಗಿಡಮೂಲಿಕೆ ಖಟ್ನಿಲ್‌ನಿಂದ ನೆಲವನ್ನು ಒರೆಸಬೇಕು. ಈ ಗಿಡಮೂಲಿಕೆ ಖಟ್ನಿಲ್ ನೊಣಗಳು, ಇರುವೆಗಳು, ಸೊಳ್ಳೆಗಳು, ತಿಗಣೆಗಳು, ಜಿರಳೆಗಳು, ಹಲ್ಲಿಗಳು, ಜೇಡ ಮುಂತಾದ ಕ್ರಿಮಿಕೀಟಗಳನ್ನು ನಿವಾರಿಸುತ್ತದೆ. ಇದು ಗಿಡಮೂಲಿಕೆಯಿಂದ ತಯಾರಾಗಿರುವುದರಿಂದ ಯಾವುದೇ ಅಡ್ಡ ಪರಿಣಾಮವಿಲ್ಲದೆ ಸುರಕ್ಷಿತವಾದುದಾಗಿದೆ. ಅಪ್ಯಾಯಮಾನವಾದ ಸುಗಂಧ ಹೊಂದಿದೆ. ನೆಲವನ್ನು ಚೆನ್ನಾಗಿ ಸ್ವಚ್ಛಗೊಳಿಸಿ ಹೊಳೆಯುವಂತೆ ಮಾಡುತ್ತದೆ.

SUPER STOCKIST FOR KARNATAKA

**M/s. GIRIJA ASSOCIATES**

No.21/22, 1st Floor, J.J. Mansion, H.Siddaiah Road,
Bangalore-560 002. Ph: 22223838 / 22243939 / 22276061

**MIDAS HYGIENE INDUSTRIES (P) LIMITED**
Tel. No.: 022 32094336
Email: midas.09@gmail.com
Website: www.midashygiene.biz
Trade enquiries solicited